# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.02 | Issue. 195 | Pages. 2 | Date: 14-07-2026, TUESDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 195 - ಪುಟಗಳು : 2 14-07-2026 ಮಂಗಳವಾರ Ph: 8762954248 ದರ : ₹1


# ಬೆಟ್ಟದ ಭೈರವೇಶ್ವರ ಪಾವಿತ್ರ್ಯತೆ ಕಾಪಾಡೋಣ

## ಶಾಸಕ ಸಿಮೆಂಟ್ ಮಂಜು ಸಲಹೆ | ಮೂಲಸೌಕರ್ಯ ಅಭಿವೃದ್ಧಿಗೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ದೇವಾಲಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇತಿಹಾಸ ಪ್ರಸಿದ್ಧ ಬೆಟ್ಟದ ಭೈರವೇಶ್ವರ ದೇವಾಲಯದ ಪಾವಿತ್ರ್ಯ ಹಾಗು ಧಾರ್ಮಿಕ ವಾತಾವರಣಕ್ಕೆ ಧಕ್ಕೆ ಉಂಟಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ದೇವಾಲಯಕ್ಕೆ ಭೇಟಿ ನೀಡಿ ಸ್ಥಳೀಯರು, ಭಕ್ತರು, ತಹಸೀಲ್ದಾರ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಈ ಕ್ಷೇತ್ರವು ಎಂಟು ಗ್ರಾಮಗಳ ಜನರ ಆರಾಧ್ಯ ದೈವವಾಗಿದ್ದು, ಪ್ರಕೃತಿ ಸೌಂದರ್ಯದ ಮಧ್ಯೆ ನೆಲೆಸಿರುವ ಕಾರಣ ನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಪ್ರವಾಸೋದ್ಯಮವನ್ನು ಸ್ವಾಗತಿಸಿದರೂ, ದೇವಾಲಯದ ಆವರಣದಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಇತ್ತೀಚೆಗೆ ದೇವಾಲಯದ ಆವರಣದಲ್ಲಿ ಜೋರಾಗಿ ಸಂಗೀತ ಹಾಕಿ ನೃತ್ಯ ನಡೆಸಿದ ಘಟನೆ ಭಕ್ತರ ಭಾವನೆಗಳಿಗೆ ನೋವುಂಟು ಮಾಡಿದೆ. ದೇವಾಲಯಗಳು ಮನರಂಜನೆಯ



ತಾಣಗಳಲ್ಲ. ಭಕ್ತಿ, ಶ್ರದ್ಧೆ ಮತ್ತು ಸಂಸ್ಕೃತಿಯ ಕೇಂದ್ರಗಳಾಗಿವೆ. ಆದ್ದರಿಂದ ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಸ್ಥಳೀಯರ ಸಲಹೆ ಆಧರಿಸಿ ದೇವಾಲಯದ ಅಭಿವೃದ್ಧಿಗೆ ಈಗಾಗಲೇ 8 ಲಕ್ಷ ರೂ. ಅನುದಾನ ಮೀಸಲಿಡಲಾಗಿದೆ. ಎರಡು-ಮೂರು ದಿನಗಳೊಳಗೆ ಪ್ರವೇಶ ದ್ವಾರ (ಗೇಟ್), ವಾಚ್‌ಮನ್ ಕೊಠಡಿ, ಚೈನ್‌ಲಿಂಕ್ ಮೆಷ್ ಬೇಲಿ, ಶೌಚಾಲಯ, ವಿದ್ಯುತ್ ಸಂಪರ್ಕ ಸೇರಿ ಮೂಲ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯೂ ಪೂರ್ಣಗೊಂಡಿದ್ದು, ಅಗತ್ಯ ಸೌಲಭ್ಯಗಳನ್ನು ಶೀಘ್ರ ಕಲ್ಪಿಸಲಾಗುವುದು ಎಂದರು.

ದೇವಾಲಯದ ಸುರಕ್ಷತೆಗೆ ಅಗತ್ಯವಾದ ತಡೆಗೋಡೆ (ರಿಟೈನಿಂಗ್ ವಾಲ್) ನಿರ್ಮಾಣಕ್ಕೂ ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮಣ್ಣು ಕುಸಿತದ ಅಪಾಯ ಇರುವ ಹಿನ್ನಲೆಯಲ್ಲಿ ಈ ಕಾಮಗಾರಿಯನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ದೇವಾಲಯದ ಪಾವಿತ್ರ್ಯ ಕಾಪಾಡುವ ಉದ್ದೇಶದಿಂದ ಚಪ್ಪಲಿ ಹೊರಗಡೆ ಬಿಡುವುದು, ದೇವಾಲಯದ ಕಟ್ಟೆಯ ಮೇಲೆ ಏರದಿರುವುದು, ಅಸಭ್ಯ ವರ್ತನೆ ಮಾಡದಿರುವುದು ಸೇರಿ ಪಾಲಿಸಬೇಕಾದ ನಿಯಮಗಳನ್ನು ಸೂಚಿಸುವ ಫಲಕಗಳನ್ನು ಅಳವಡಿಸಲಾಗುವುದು. ಅಗತ್ಯವಿದ್ದರೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ನಿರಂತರ ನಿಗಾ ವಹಿಸಲಾಗುವುದು ಎಂದು ಹೇಳಿದರು.

ದೇವಾಲಯದ ಆಡಳಿತ ಹಾಗೂ ಸಂರಕ್ಷಣೆಗೆ ತಾತ್ಕಾಲಿಕ ಸಮಿತಿ ರಚಿಸುವ ಕುರಿತು ಸ್ಥಳೀಯರು ಮನವಿ ಸಲ್ಲಿಸಿದ್ದು, ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್ ಅವರೊಂದಿಗೆ ಚರ್ಚಿಸಿ ಸರ್ಕಾರದ ಮಾರ್ಗಸೂಚಿಗಳಂತೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ತಹಸೀಲ್ದಾರ್ ಸುಪ್ರಿತಾ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ವಲಯ ಅರಣ್ಯಧಿಕಾರಿ ಹೇಮಂತ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

### ಪ್ರವಾಸಿಗರಿಗೆ ಶಾಸಕರ ಕೋರಿಕೆ

ಬೆಟ್ಟದ ಭೈರವೇಶ್ವರ ದೇವಾಲಯದ ಪ್ರಕೃತಿ ಸೌಂದರ್ಯವನ್ನು ಎಲ್ಲರೂ ಸವಿಯಲಿ. ಆದರೆ ದೇವಾಲಯದ ಪಾವಿತ್ರ್ಯಕ್ಕೆ ಧಕ್ಕೆ ಉಂಟುಮಾಡುವ ಕೃತ್ಯ, ಅಸಭ್ಯ ವರ್ತನೆ, ಜೋರಾಗಿ ಸಂಗೀತ ಹಾಕುವುದು, ನೃತ್ಯ ಮಾಡುವುದು ಅಥವಾ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವ ಚಟುವಟಿಕೆಗಳಿಂದ ದೂರವಿರಬೇಕು. ಹಿಂದು ದೇವಾಲಯಗಳು ನಮ್ಮ ಸಂಸ್ಕೃತಿ, ನಂಬಿಕೆ ಮತ್ತು ಪರಂಪರೆಯ ಸಂಕೇತಗಳಾಗಿದ್ದು, ಅವುಗಳ ಗೌರವ ಮತ್ತು ಪಾವಿತ್ರ್ಯ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಶಾಸಕ ಸಿಮೆಂಟ್ ಮಂಜು ಮನವಿ ಮಾಡಿದರು.

## ಜಿನ್ನೇನಹಳ್ಳಿ ಶನೇಶ್ವರ ದೇವಾಲಯ ಆದಾಯ ದುರುಪಯೋಗ ಆಗಿಲ್ಲ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ; ತಾಲ್ಲೂಕಿನ ಜಿನ್ನೇನಹಳ್ಳಿ ಗ್ರಾಮದ ಶನೇಶ್ವರ ದೇಗುಲವನ್ನು ಮುಜರಾಯಿ ವ್ಯಾಪ್ತಿಗೆ ಸೇರಿಸಲು ಅಭ್ಯಂತರವಿಲ್ಲ, ಆದರೆ ದೇಗುಲದ ಆಸ್ತಿ, ಹಣ ದುರುಪಯೋಗ ಆಗಿದೆ ಎಂಬುದು ಆಧಾರ ರಹಿತ ಎಂದು ದೇವಸ್ಥಾನದ ಉಸ್ತುವಾರಿ ಜಿ.ಎನ್.ಮಧುಸೂಧನ್ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಕುಟುಂಬ ದೇವಸ್ಥಾನ ನಿರ್ಮಾಣ ಮಾಡಲು ಸಾಕಷ್ಟು ಶ್ರಮಿಸಿದೆ. ನಮ್ಮೊಂದಿಗೆ ಜಿನ್ನೇನಹಳ್ಳಿ ಗ್ರಾಮ ಸೇರಿ ಅಕ್ಕಪಕ್ಕದ ಗ್ರಾಮಸ್ಥರ ಸಹಕಾರದಿಂದ 2013ರಲ್ಲಿ ದೇಗುಲ ಲೋಕಾರ್ಪಣೆಯಾಗಿದೆ ಎಂದು ತಿಳಿಸಿದರು.

ನಮ್ಮ ತಂದೆಯವರು ಗ್ರಾಮದವರ ಸಮ್ಮುಖದಲ್ಲಿ ಲೆಕ್ಕಪತ್ರ ಮಂಡಿಸಿದ್ದಾರೆ.

ಶಿವರಾತ್ರಿ ವೇಳೆ ನಡೆಯುವ ಮೂರು ದಿನಗಳ ವಿಶೇಷ ಪೂಜೆ ಹೊರತಾಗಿ ದೇವಸ್ಥಾನಕ್ಕೆ ಯಾವುದೇ ಆದಾಯದ ಮೂಲವಿಲ್ಲ, ದಾನಿಗಳ ಸಹಕಾರದಿಂದ ಹಂತಹಂತವಾಗಿ ಜೀರ್ಣೋದ್ಧಾರ ನಡೆಸಲಾಗಿದೆ ಎಂದರು.

ಗ್ರಾಮ ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ಸೇರಿ ಸಮಿತಿ ರಚಿಸಿಕೊಂಡು ಖರ್ಚು ವೆಚ್ಚವನ್ನು ಪಾರದರ್ಶಕವಾಗಿ ನಡೆಸಲಾಗುತ್ತಿದೆ ಎಂದು ಹೇಳಿದರು.

ಸರ್ಕಾರಿ ಗೋಮಾಳವಾಗಿರುವ ಸರ್ವೆ ನಂ. 8 ಮತ್ತು 9 ರಲ್ಲಿನ 3 ಎಕರೆ ಜಾಗವನ್ನು ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸಿ ಚೈನ್ ಲಿಂಕ್ ಪೇನ್ಸಿಂಗ್, ವಾಕಿಂಗ್ ಪಾಥ್ ನಿರ್ಮಾಣ ಮಾಡಿ ಸಾರ್ವಜನಿಕ ಉದ್ದೇಶಕ್ಕಾಗಿ ಪಾರ್ಕ್ ನಿರ್ಮಾಣ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿಯೇ ಪಹಣಿಯಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಎಂದು ಮೀಸಲಿರಿಸಿ ಆದೇಶಿಸಿದ್ದಾರೆ. ಇದನ್ನು ನಾವು ಸ್ವಂತಕ್ಕೆ ಮಾಡಿಕೊಳ್ಳಲು ಹೊರಟಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು, ಆರೋಪ ಮಾಡುವ ಚಂದ್ರಹಾಸ್ ರವರು ಗ್ರಾಮದಲ್ಲೆ ಇಲ್ಲ, ಅವರ ಕುಟುಂಬವಷ್ಟೆ ಇದ್ದು, ಮುಂದಿನ ಸ್ಥಳೀಯ ಚುನಾವಣೆ ಹಿನ್ನಲೆ ರಾಜಕೀಯ ಉದ್ದೇಶದಿಂದ ತಮ್ಮ ತೇಜೋವಧೆ ಮಾಡುತ್ತಿದ್ದಾರೆ. ಅವರು ಹೇಳಿರುವಂತೆ ದೇಗುಲವನ್ನು ಮುಜರಾಯಿ ವ್ಯಾಪ್ತಿಗೆ ಒಪ್ಪಿಸಲು ತಮ್ಮ ತಕರಾರು ಇಲ್ಲವೆಂದರು.

ಗ್ರಾಮಸ್ಥರಾದ ಕಿರಣ್‌ಕುಮಾರ್, ರಾಮಕೃಷ್ಣ, ಮಂಜುನಾಥ್, ವಾಸು ಸೇರಿ ಇತರರು ಇದ್ದರು.

## ಶಿಥಿಲಾವಸ್ಥೆ ತಲುಪಿದ್ದ ಕಟ್ಟಡ ಕುಸಿತ: ತಪ್ಪಿದ ಅನಾಹುತ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ತೋಟಗಾರಿಕೆ ಇಲಾಖೆ ಕಚೇರಿ ಕಟ್ಟಡ ಸಂಪೂರ್ಣ ಕುಸಿದು ಬಿದ್ದಿದ್ದು, ಕಚೇರಿ ಆರಂಭಕ್ಕೂ ಮುನ್ನವೇ ಘಟನೆ ನಡೆದಿದ್ದರಿಂದ ಭಾರೀ ಅನಾಹುತ ತಪ್ಪಿದೆ.

ಶನಿವಾರ ಕಚೇರಿಗೆ ಟೀ ನೀಡಲು ಬಂದಿದ್ದ ಆದಂ ಎಂಬುವವರು ಕಟ್ಟಡ ಕುಸಿಯುವ ಹಂತದಲ್ಲಿದ್ದು ಅಪಾಯವಿದೆ ಎಂದು ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಸಿಬ್ಬಂದಿ ಶನಿವಾರ ಸಂಜೆ ಕಚೇರಿಯ ಪ್ರಮುಖ ಕಡತಗಳು ಹಾಗೂ ದಾಖಲೆಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ್ದರು.

ಭಾನುವಾರ ಮಧ್ಯರಾತ್ರಿ ಕಟ್ಟಡದ ಒಂದು ಭಾಗ ಕುಸಿಯಲಾರಂಭಿಸಿದ್ದು, ಸಿಬ್ಬಂದಿ ಮತ್ತಷ್ಟು ಎಚ್ಚರಿಕೆಯಿಂದ ಕಚೇರಿಯನ್ನು ತೆರೆಯದೆ ಇರಲು ನಿರ್ಧರಿಸಿದ್ದರು. ಬಳಿಕ ಬೆಳಗಿನ ಜಾವ ಕಟ್ಟಡ ಹಂತಹಂತವಾಗಿ ಸಂಪೂರ್ಣ ನೆಲಸಮವಾಗಿದೆ.

ಕಚೇರಿ ಆರಂಭವಾಗುವ ಮುನ್ನವೇ ಕಟ್ಟಡ ಕುಸಿದಿರುವುದು ಹಾಗೂ ಟೀ ಅಂಗಡಿಯು ನೀಡಿದ ಮುನ್ನೆಚ್ಚರಿಕೆಯಿಂದ ಸಿಬ್ಬಂದಿ ಎಚ್ಚೆತ್ತುಕೊಂಡಿದ್ದರಿಂದ ಸಂಭವಿಸಬಹುದಾಗಿದ್ದ ಭಾರೀ ದುರಂತ ತಪ್ಪಿದಂತಾಗಿದೆ. ಘಟನೆ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಳೆದ 30 ವರ್ಷಗಳಿಂದ ಕಾಫಿ, ಟೀ ಅಂಗಡಿ ನಡೆಸುತ್ತಿರುವ ಆದಮ್ ಅವರು ಸುತ್ತಮುತ್ತಲಿನ ಸರ್ಕಾರಿ ಕಚೇರಿಗಳಿಗೆ ಟೀ ಹಾಗೂ ಕಾಫಿ ಪೂರೈಸುತ್ತಾ ಬಂದಿದ್ದಾರೆ. ಕಟ್ಟಡದ ಸ್ಥಿತಿಯನ್ನು ಚೆನ್ನಾಗಿ ಅರಿತಿದ್ದ ಅವರು ಕಟ್ಟಡದಲ್ಲಿ ಬಿರುಕು ಕಾಣಿಸಿಕೊಂಡಿರುವುದನ್ನು ಗಮನಿಸಿ ಅಧಿಕಾರಿಗಳಿಗೆ ತಕ್ಷಣ ಮಾಹಿತಿ ನೀಡಿ ಎಚ್ಚರಿಕೆ ನೀಡಿದರು. ಇದರ ಪರಿಣಾಮವಾಗಿ ಏಳು ಸಿಬ್ಬಂದಿಯ ಜೀವಗಳೊಂದಿಗೆ ಕಚೇರಿಯಲ್ಲಿದ್ದ ಎಲ್ಲಾ ದಾಖಲೆಗಳು ಸುರಕ್ಷಿತವಾಗಿ ಉಳಿದವು.

## ಸಮುದಾಯದ ಪ್ರಗತಿಗೆ ಎಲ್ಲರೂ ಶ್ರಮ ವಹಿಸಬೇಕು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಂಘ, ಸಂಸ್ಥೆಗಳು ಸಮುದಾಯದ ಪ್ರಗತಿಗೆ ಶ್ರಮಿಸಬೇಕು ಎಂದು ಮೈಸೂರಿನ ಪರಿವರ್ತನ ಸಂಸ್ಥೆಯ ಸಂಸ್ಥಾಪಕ ಚೇತನ್ ರಾಮು ಹೇಳಿದರು.

ಪಟ್ಟಣದಲ್ಲಿ ಏರ್ಪಡಿಸಿದ್ದ ರೋಟರಿ ಕ್ಲಬ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಯಾವ ಕೆಲಸಕ್ಕೆ ಆದ್ಯತೆ ನೀಡಬೇಕು ಎಂಬುದನ್ನು ತಿಳಿದು ಮುನ್ನಡೆಯಬೇಕು. ಕೆಲಸವನ್ನು ಇಷ್ಟಪಟ್ಟು ಮಾಡಿದಾಗ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಗಳಿಸಿದ ಆದಾಯದಲ್ಲಿ ಇಂತಿಷ್ಟು ಭಾಗವನ್ನು ನೊಂದವರ ಏಳಿಗೆಗೆ ಮೀಸಲಿಡುವ ಮೂಲಕ ಸೇವಾ ಮನೋಭಾವ ರೂಢಿಸಿಕೊಳ್ಳಬೇಕು. ಮಾನವೀಯ ಮೌಲ್ಯ ಮುಖ್ಯವಾದುದು ಎಂದರು.

ಕ್ಲಬ್ ಸಹಾಯಕ ರೋಟರಿ ಗವರ್ನರ್ ಮಂಜುನಾಥ್ ಮಾತನಾಡಿ, ಪ್ರಪಂಚದ 120 ದೇಶಗಳಲ್ಲಿ ರೋಟರಿ ಕ್ಲಬ್ ಅಸ್ತಿತ್ವದಲ್ಲಿದೆ. ಶಿಕ್ಷಣ, ಆರೋಗ್ಯ, ಗಿಡ ನೆಡುವುದು, ಪರಿಸರ ಸಂರಕ್ಷಣೆ ಸೇರಿ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಆದ್ಯತೆ ನೀಡುತ್ತಿದೆ. ರೋಟರಿ ಕ್ಲಬ್ ಸಂಸ್ಥೆಗಳನ್ನು ವಿಸ್ತರಿಸುವ ದೃಷ್ಟಿಯಿಂದ ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ, ನುಗ್ಗೇಹಳ್ಳಿ, ಬಾಗೂರು, ಶ್ರವಣಬೆಳಗೊಳದಲ್ಲಿ ರೋಟರಿ ಕ್ಲಬ್ ಆರಂಭಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷ ಎಚ್.ಎನ್. ಶಿವಂಜೇಗೌಡ ಮಾತನಾಡಿ, ನಾವು ಮಾಡುವ ಕೆಲಸದಿಂದ ಎಷ್ಟು ಜನರಿಗೆ ಉಪಯೋಗವಾಗುತ್ತದೆ ಎಂಬುದು ಮುಖ್ಯ. ಎಲ್ಲರ ಸಹಕಾರದಿಂದ ಸಮಾಜಮುಖಿ ಕಾರ್ಯಕ್ರಮ ರೂಪಿಸಲಾಗುವುದು ಎಂದು ತಿಳಿಸಿದರು.

## ಕ್ಷುಲ್ಲಕ ಕಾರಣಕ್ಕೆ ಚಾಕು ಇರಿತ: ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಕ್ಷುಲ್ಲಕ ಕಾರಣಕ್ಕೆ ಶುರುವಾದ ಮಾತಿನ ಚಕಮಕಿ ಮಾರಾಮಾರಿ ಹಂತಕ್ಕೆ ತಲುಪಿ ಯುವಕನ ಮೇಲೆ ಚಾಕುವಿನಿಂದ ಚುಚ್ಚಿ ಹಲ್ಲೆ ನಡೆಸಿದ ಘಟನೆ ಪಟ್ಟಣದ ಜೆ.ಪಿ ನಗರ ಮುಖ್ಯರಸ್ತೆ ಬಳಿ ನಡೆದಿದೆ.

ಗಾಯಗೊಂಡಿರುವ ಯುವಕನನ್ನು ತೆಂಡೇಕೆರೆ ಗ್ರಾಮದ ದಿವಾಕರ್ ಎಂದು ಗುರುತಿಸಲಾಗಿದ್ದು, ಹಲ್ಲೆ ನಡೆಸಿದ ಆರೋಪದ ಮೇಲೆ ರಾಮೇನಹಳ್ಳಿ ಗ್ರಾಮದ ಭರತ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಮದುವೆ ಕಾರ್ಯಕ್ರಮ ಮುಗಿಸಿ ವಾಪಸಾಗುತ್ತಿದ್ದ ವೇಳೆ ದಿವಾಕರ್ ಮತ್ತು ಭರತ್ ನಡುವೆ ಕ್ಷುಲ್ಲಕ ಕಾರಣಕ್ಕೆ ಮಾತಿನ ಚಕಮಕಿ ನಡೆದಿದೆ.

ಬಳಿಕ ಅದು ವಿಕೋಪಕ್ಕೆ ತಿರುಗಿ, ಆರೋಪಿ ಭರತ್ ತನ್ನ ಬಳಿ ಇದ್ದ ಹರಿತವಾದ ಚಾಕುವಿನಿಂದ



ದಿವಾಕರ್ ಮೇಲೆ ಹಲ್ಲೆ ಮಾಡಿದ್ದಾನೆ.

ದಿವಾಕರ್ ತಲೆ ಹಾಗೂ ಕುತ್ತಿಗೆ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ಸ್ಥಳೀಯರು ತಕ್ಷಣವೇ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಹಾಸನ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಾಹಿತಿ ತಿಳಿದ ಇನ್ಸ್‌ಪೆಕ್ಟರ್ ರೇವಣ್ಣ ನೇತೃತ್ವದ ತಂಡ ಸ್ಥಳಕ್ಕೆ ಧಾವಿಸಿ, ಜೆ.ಪಿ ನಗರದಲ್ಲಿ ಆರೋಪಿಯನ್ನು ಬಂಧಿಸಿದೆ. ಈ ಸಂಬಂಧ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಆರೋಪಿ ಭರತ್ ಹಿಂದೆಯೂ ಸಣ್ಣಪುಟ್ಟ ಗಲಾಟೆಗಳಲ್ಲಿ ಭಾಗಿಯಾಗಿದ್ದು, ಈತನ ವಿರುದ್ಧ ಈಗಾಗಲೇ ಹಲವು ಪ್ರಕರಣ ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಹಳೆಯ ಸರ್ಕಾರಿ ಕಟ್ಟಡ ದುರಸ್ತಿಗೆ ಆದ್ಯತೆ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಇತ್ತೀಚಿನ ಮಳೆ ಹಾಗೂ ಬಿರುಗಾಳಿಯಿಂದ ಹಾನಿಗೊಳಗಾದ ಸರ್ಕಾರಿ ಕಟ್ಟಡಗಳ ದುರಸ್ತಿಗೆ ಆದ್ಯತೆ ನೀಡಿ ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಮುಖ್ಯರಸ್ತೆಯಲ್ಲಿರುವ ತೋಟಗಾರಿಕೆ ಇಲಾಖೆ ಕಟ್ಟಡ ಹಾಗೂ ಸರ್ಕಾರಿ ಉರ್ದು ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಥಿಲಾವಸ್ಥೆಯಲ್ಲಿರುವ ತೋಟಗಾರಿಕೆ ಇಲಾಖೆ ಕಟ್ಟಡದ ಪುನರ್ ನಿರ್ಮಾಣಕ್ಕೆ ಈಗಾಗಲೇ 42 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಶೀಘ್ರದಲ್ಲೇ ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ



ನೀಡಲಾಗುವುದು ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯ ನೂತನ ಕಟ್ಟಡದ ಮೇಲ್ಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆಯ ಕಚೇರಿಯನ್ನೂ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಹಲವು ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಗೆ ಶಾಶ್ವತ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮುಂದಿನ ಹಂತದ ಅನುದಾನವನ್ನು ಸರ್ಕಾರದಿಂದ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸರ್ಕಾರಿ ಶಾಲೆಗಳ ದುರಸ್ತಿ ಕುರಿತು ಮಾತನಾಡಿದ ಅವರು, ಕೆಲವು ಶಾಲೆಗಳ ಎಸ್‌ಡಿಎಂಸಿ ಸದಸ್ಯರು ಹಾಗೂ ಪೋಷಕರು ಸ್ವಯಂಪ್ರೇರಿತರಾಗಿ ದುರಸ್ತಿ ಕಾರ್ಯಕ್ಕೆ ಮುಂದಾಗಿರುವುದು ಶ್ಲಾಘನೀಯ. ಎಸ್‌ಡಿಎಂಸಿ ನಿರ್ಣಯದೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಶಿಕ್ಷಣ ಇಲಾಖೆಯ ಮಾರ್ಗಸೂಚಿಯಂತೆ ಅಗತ್ಯ ಅನುಮತಿ ಹಾಗೂ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಹೇಳಿದರು.

ಜನಪ್ರತಿನಿಧಿಗಳು, ಅಧಿಕಾರಿಗಳು, ಎಸ್‌ಡಿಎಂಸಿ ಸದಸ್ಯರು ಹಾಗೂ ಪೋಷಕರು ಸಮನ್ವಯದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ, ಬಿಆರ್‌ಸಿ ಗಂಗಾಧರ, ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಮುಖಂಡರಾದ ರೆಹಮಾನ್, ಜಮೀಲ್ ಮತ್ತಿತರರಿದ್ದರು.

# ಪತ್ರಕರ್ತರಿಗೆ ಸದಾ ಸಮಾಜ ಎಚ್ಚರಿಸುವ ಕೆಲಸ: ಶಂಭುನಾಥ ಶ್ರೀ

## ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ಶಿವಲಿಂಗೇಗೌಡರು ಶೀಘ್ರ ಮಂತ್ರಿಯಾಗಲೆಂದು ಆಶಯ ವ್ಯಕ್ತಪಡಿಸಿದ ಹಲವರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಪತ್ರಕರ್ತರು ಸದಾ ಸಮಾಜವನ್ನು ಎಚ್ಚರಿಸುವ ಕೆಲಸ ಮೂಲಕ ಸೇವೆ ಮಾಡುತ್ತಿದ್ದಾರೆ. ಮುದ್ರಣ ಮಾಧ್ಯಮಕ್ಕೆ ನಿರಂತರವಾಗಿ ಮೌಲ್ಯ ಇರುತ್ತದೆ ಎಂದು ಶ್ರೀ ಆದಿಚುಂಚನಗಿರಿ ಹಾಸನ-ಹಾಸನ ಕೊಡಗು ಶಾಖಾಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಕಸ್ತೂರಬಾ ಗಾಂಧಿ ಸ್ಮಾರಕ ಸಭಾಂಗಣದಲ್ಲಿ ಭಾನುವಾರ ನಡೆದ ಜಿಲ್ಲಾ ಸಮ್ಮೇಳನ ಹಾಗೂ ಪತ್ರಿಕಾ ದಿನಾಚರಣೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದಷ್ಟೇ ಪತ್ರಿಕಾ ರಂಗಮೂ ಪ್ರಮುಖವಾಗಿದೆ. ಖಡ್ಗಕ್ಕಿಂತ ಹರಿತವಾದುದು ಲೇಖನಿ. ಹಾಗಾಗಿ ಒಬ್ಬ ಪತ್ರಕರ್ತನಿಗೆ ಸದಾ ಬೆಲೆ ಇರುತ್ತದೆ ಎಂದರು.

ದೀಪದ ಬೆಳಕಿನಲ್ಲಿ ಭಗವತ್ ಗೀತೆ ಓದಬಹುದು, ಹಾಗೆಯೇ ಕಳ್ಳತನವನ್ನೂ ಮಾಡಬಹುದು. ಆದರೆ ಪ್ರತಿಯೊಬ್ಬರೂ ಯಾವುದು ಒಳ್ಳೆಯ ಕಾರ್ಯವೋ ಅದನ್ನೇ ಮಾಡಬೇಕು. ಪತ್ರಕರ್ತರು ಸಮಾಜ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದು ಕರೆ ನೀಡಿದರು.

ಪತ್ರಕರ್ತರು ಸಮಾಜದ ಅಂಕು-ಡೊಂಕು ತಿದ್ದಿ ಸಮಾಜವನ್ನು ಎಚ್ಚರಿಸುವ ಅತ್ಯಮೂಲ್ಯ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ, ಸ್ಥಳೀಯ ಶಾಸಕ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಮಾತನಾಡಿ, ಪತ್ರಕರ್ತರಿಗೆ ಸುದ್ದಿಗೋಷ್ಠಿ ನಡೆಸಲು ಅಥವಾ ಬೇರೆ ಯಾವುದೇ ಚಟುವಟಿಕೆ ನಡೆಸಲು ಸ್ವಂತ ಕಟ್ಟಡದ ಅವಶ್ಯಕತೆ ಇರುತ್ತದೆ. ಅದನ್ನು ಮನಗೊಂಡು ಅರಸೀಕೆರೆಯಲ್ಲಿ ನೂತನ ಪತ್ರಕರ್ತರ ಭವನ ನಿರ್ಮಾಣ ಮಾಡಲು ನಿವೇಶನವನ್ನು ಸರ್ಕಾರದಿಂದ ಒದಗಿಸಿದ್ದು,



ಈಗಾಗಲೇ ಶಂಕುಸ್ಥಾಪನೆ ನೆರವೇರಿಸಿದ್ದು, ಸುಂದರ ಹಾಗೂ ಸುಸಜ್ಜಿತ ಪತ್ರಿಕಾ ಭವನ ನಿರ್ಮಾಣ ಮಾಡಲು ನಾನೇ ಪೂರ್ಣ ಪ್ರಮಾಣದಲ್ಲಿ ಹಣ ಒದಗಿಸುತ್ತೇನೆ. ಏಳೆಂಟು ತಿಂಗಳೊಳಗೆ ಭವನ ನಿರ್ಮಾಣದ ಕೆಲಸ ಮುಗಿಸೋಣ. ಮುಂದಿನ ದಿನಾಚರಣೆ ಸಂಘದ ಆವರಣದಲ್ಲೇ ನಡೆಯಲಿದೆ ಎಂದು ಭರವಸೆ ನೀಡಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜಿ.ಆರ್. ಕೆಂಚೇಗೌಡ ಮಾತನಾಡಿ, ಪತ್ರಕರ್ತರು ಮಳೆ, ಗಾಳಿ, ಬಿಸಿಲು ಎನ್ನದೆ ಸತ್ಯವನ್ನು ಹುಡುಕಿ ಜನರಿಗೆ ವಸ್ತುನಿಷ್ಠ ವರದಿ ಮಾಡುತ್ತಾರೆ.

ಸರ್ಕಾರದ ಯೋಜನೆ ಹಾಗೂ ನಿರ್ಧಾರಗಳನ್ನು ಜನಸಾಮಾನ್ಯರಿಗೆ ತಲುಪಿಸಿ ಜನಪರ ಕಾರ್ಯಗಳಿಗೆ ಒತ್ತಾಸೆಯಾಗಿ ಪತ್ರಕರ್ತರು ನಿಲ್ಲುತ್ತಾರೆ ಎಂದರು.

ಇದಕ್ಕೂ ಮುನ್ನ ಆಶಯ ನುಡಿಗಳನ್ನಾಡಿದ ಕೆಯೂಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತನಾಡಿ, ರಾಜಕೀಯವಾಗಿ ತನ್ನ ಶಕ್ತಿ, ಪ್ರಾಬಲ್ಯ ಹೊಂದಿರುವ ಹಾಸನ ಜಿಲ್ಲೆಗೆ ಹೊರಗಿನವರು ಉಸ್ತುವಾರಿ ಸಚಿವರಾಗಿ ಬರುವ ಮೊದಲು, ನಮ್ಮವರೇ ಆದ ಶಿವಲಿಂಗೇಗೌಡರು ಸಚಿವರಾಗಿ ಜಿಲ್ಲೆಯ ಹೊಣೆಗಾರಿಕೆ ಹೊರುವ ಅವಕಾಶ ಶೀಘ್ರವೇ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಸಂತೋಷ್ ಕುಮಾರ್, ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ನಗರಸಭೆ ನಿಕಟಪೂರ್ವ ಅಧ್ಯಕ್ಷ ಎಂ.ಸಮೀವುಲ್ಲಾ, ಅನಂತ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ಅನಂತ್ ಕುಮಾರ್, ನಗರಸಬೆ ಮಾಜಿ ಸದಸ್ಯ ದರ್ಶನ್, ಜಿಲ್ಲಾ ಸಂಘದ ಉಪಾಧ್ಯಕ್ಷ ಜಿ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಖಜಾಂಚಿ ಬೆಳವಾಡಿ ಪ್ರಕಾಶ್ ಮೊದಲಾದವರಿದ್ದರು.

ದಿಕ್ಸೂಚಿ ಮಾತುಗಳನ್ನಾಡಿದ ಕೆಯೂಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು, ಅರಸೀಕೆರೆ ತಾಲೂಕಿಗೆ ಅಗತ್ಯವಿದ್ದ ಪತ್ರಕರ್ತರ ಭವನವನ್ನು ಶಾಸಕ ಶಿವಲಿಂಗೇಗೌಡರು ವಿಶೇಷ ಕಾಳಜಿ ವಹಿಸಿ ಸರ್ಕಾರದ ನೆರವಿನಿಂದ ಮತ್ತು ತಮ್ಮ ಕೊಡುಗೆಯಾಗಿ ಮುತುವರ್ಜಿ ವಹಿಸಿ ಎಲ್ಲಾ ಖರ್ಚುಗಳನ್ನು ಅವರೇ ವಹಿಸಿಕೊಂಡಿರುವುದು ನಮ್ಮೆಲ್ಲರ ಹೆಮ್ಮೆ ಮತ್ತು ಸೌಭಾಗ್ಯ ಎಂದರು.

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ

ಶಿವಲಿಂಗೇಗೌಡರು ಮಂತ್ರಿ ಪದವಿ ಅಲಂಕರಿಸಿ ಕೆಲವೇ ತಿಂಗಳಿಗಳಲ್ಲಿ ನೂತನ ಪತ್ರಕರ್ತರ ಭವನ ಉದ್ಘಾಟಿಸಲಿದ್ದಾರೆ ಎಂದರು.

ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತನಾಡಿ, ಅರಸೀಕೆರೆ ತಾಲೂಕಿನಲ್ಲಿ ಪತ್ರಕರ್ತರ ಭವನ ನಿರ್ಮಾಣಕ್ಕೆ ಪೂಜೆ ನೆರವೇರಿದೆ. ಶಿವಲಿಂಗೇಗೌಡರೇ ಆಸಕ್ತಿವಹಿಸಿ ನಿವೇಶವನ್ನೂ ತಮ್ಮ ಖರ್ಚಿನಲ್ಲೇ ನೋಂದಣಿ ಮಾಡಿಸಿಕೊಟ್ಟು, ಅದರ ನಿರ್ಮಾಣಕ್ಕೆ ಅವರೇ ಹಣ ನೀಡುವುದಾಗಿ ಹೇಳಿದ್ದಾರೆ.ಮುಂದೆ ಇದು ಮಾದರಿ ಪತ್ರಕರ್ತರ ಭವನ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ.ಆನಂದ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಕೀಲ ಬಿ.ಕೆ. ವಿವೇಕ್, ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ರಾಂಪುರ ಶೇಖರ್, ಅರಸೀಕೆರೆ ತಾ.ಪಂ.ಸಂಘದ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ಹಿರಿಯ ಪತ್ರಕರ್ತರಾದ ಚಿದಾನಂದ ಪಟೇಲ್, ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು, ತಾಲೂಕು ಸಂಘಗಳ ಅಧ್ಯಕ್ಷರಾದ ಬಿ.ಬಿ.ಶಿವರಾಜು, ವೆಂಕಟೇಶ್, ಕಾಂತರಾಜು, ದಯಾನಂದ ಶೆಟ್ಟಿ, ಮೊದಲಾದವರಿದ್ದರು.

ಇದೇ ವೇಳೆ ತಾಲೂಕಿನ ಹಿರಿಯ ಪತ್ರಕರ್ತರಾದ ರಾಮಚಂದ್ರು ಅವರಿಗೆ ಎಸ್.ಎನ್.ಗೋಪಿನಾಥ್ ಸ್ಮಾರಕ ಪ್ರಶಸ್ತಿ, ರವಿಶಂಕರ್ ಅವರಿಗೆ ಪಿ.ಶಾಂತಕುಮಾರ್ ಪ್ರಶಸ್ತಿ ಹಾಗೂ ಹಿರಿತನದ ಸೇವೆ ಪರಿಗಣಿಸಿ ಮಾಡಾಳು ಶಿವಲಿಂಗಪ್ಪ, ಬಿ.ಎಸ್.ಸೇತುರಾಂ ಅವರನ್ನು ಅಭಿನಂದಿಸಿ ಗೌರವಿಸಲಾಯಿತು. ಹಾಗೆಯೇ ಹಲವು ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ಸೇವೆ ಮಾಡಿರುವ ಹಿರಿಯ ಪತ್ರಕರ್ತರು ಹಾಗೂ ವಿತರಕರನ್ನು ಸನ್ಮಾನಿಸಿ ಗೌರವಿಸಲಾಯಿತು.

### 22 ವರ್ಷ ಬಾಂಧವ್ಯ

ಸಂಜೆ ನಡೆದ ಸಮಾರಂಭ ಸಮಾರಂಭದಲ್ಲಿ ಸಮಾರೋಪ ನುಡಿಗಳನ್ನಾಡಿದ ಮಾಜಿ ಮುಖ್ಯಮಂತ್ರಿ, ಮಾಜಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕನೇ ಕಂಬದ ಪ್ರತಿನಿಧಿಗಳಾಗಿರುವ ಪತ್ರಕರ್ತರು ಸಮಾಜದ ಪಾವಿತ್ರ್ಯತೆಯನ್ನು ಕಾಪಾಡುವಲ್ಲಿ ಮತ್ತು ಜನಸಾಮಾನ್ಯರಿಗೆ ನಿಖರವಾದ ಮಾಹಿತಿ ತಲುಪಿಸುವಲ್ಲಿ ಹಗಲಿರುಳು ಶ್ರಮಿಸುತ್ತಾರೆ. ಅವರ ಈ ಶ್ರಮಮೂ ನಿಜಕ್ಕೂ ಅತ್ಯಮೂಲ್ಯವಾದದ್ದು ಎಂದರು.

ಪತ್ರಿಕೆಗಳ ಪಾರದರ್ಶಕ, ವಸ್ತುನಿಷ್ಠೆ ಮತ್ತು ಸತ್ಯ ಸಂಗತಿಗಳಿಗೆ ಆದ್ಯತೆ ನೀಡಬೇಕೆಂದು ಸಲಹೆ ನೀಡಿದ ಅವರು, ತಮಗೆ 2004 ರಿಂದಲೂ ಹಾಸನ ಜಿಲ್ಲೆಯ ಮಾಧ್ಯಮ ಪ್ರತಿನಿಧಿಗಳೊಂದಿಗೆ ಬಾಂಧವ್ಯವಿದೆ. 22 ವರ್ಷಗಳಿಂದ ಪತ್ರಕರ್ತರ ಸುಖ-ದುಃಖ ಬಲ್ಲವನಾಗಿದ್ದಾನೆ.

ಕೆಯೂಡಬ್ಲ್ಯೂಜೆ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರ ಜೊತೆಯಲ್ಲಿ ಇಡೀ ರಾಜ್ಯ ಸುತ್ತಿದ್ದೇನೆ ಎಂದರು.

ಪತ್ರಿಕೋದ್ಯಮ, ಸರ್ಕಾರ, ಸಮಾಜ ಮತ್ತು ಸಂಘಟನೆಗಳ ನಡುವೆ ಸೇತುವೆಯಾಗಿ ಕೆಲಸ ಮಾಡಲು ಅನುಕೂಲವಾಗಲಿದೆ ಎಂದು ಹೇಳಿದರು, ಶಾಸಕ ಶಿವಲಿಂಗೇಗೌಡರು, ಜನರ ನಾಡಿ ಮಿಡಿತವನ್ನು ಚೆನ್ನಾಗಿ ಅರಿತಿದ್ದಾರೆ. ಅವರು ಹಣಕಾಸು ಅಥವಾ ಬಜೆಟ್ ವೇಳೆ ಆ ವಿಷಯದ ಬಗ್ಗೆ ಅಧ್ಯಯನ ನಡೆಸಿ ಅತ್ಯಂತ ಕರಾರುವಕ್ಕಾಗಿ ಮಾತನಾಡುವ ಮತ್ತು ತಾವು ಅಂದುಕೊಂಡಿದ್ದನ್ನು ಕಾರ್ಯರೂಪಕ್ಕೆ ತರುವ ಒಬ್ಬ ವಿಭಿನ್ನ ರಾಜಕಾರಣಿ ಎಂದು ಪ್ರಭಾಕರ್ ಪ್ರಶಂಸಿಸಿದರು.

# ಮನೆ ನಿರ್ಮಾಣ-ಸೈಟ್ ಖರೀದಿಸದಂತೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಕಸಬಾ ಹೋಬಳಿ ಚಿಕ್ಕಹೊನ್ನೇನಹಳ್ಳಿ ಗ್ರಾಮದ ಹೊಸ ಸರ್ವೆ ನಂ.62ಕ್ಕೆ ಸಂಬಂಧಿಸಿದ ಜಮೀನಿನ ವಿವಾದ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಅಲ್ಲಿ ನಿವೇಶನ ಖರೀದಿ ಅಥವಾ ಮನೆ ನಿರ್ಮಾಣಕ್ಕೆ ಮುಂದಾಗುವವರು ಎಚ್ಚರಿಕೆ ವಹಿಸಬೇಕು, ಇಲ್ಲವಾದ್ರೆ ನಷ್ಟ ಅನುಭವಿಸುತ್ತೀರಾ ಎಂದು ವಕೀಲ ಜಿ.ದೇವರಾಜೇಗೌಡ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸುಮಾರು 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಮ್ಮ ಹೆಸರಿನಲ್ಲಿ ನೋಂದಾಯಿತ ಮಾರಾಟ ಒಪ್ಪಂದ (ರಿಜಿಸ್ಟರ್ಡ್ ಅಗ್ರಿಮೆಂಟ್) ಇದ್ದರೂ, ಕಾನೂನುಬಾಹಿರವಾಗಿ ಬೇರೆಯವರ ಹೆಸರಿಗೆ ನೋಂದಣಿ ಮಾಡಿ ಬಳಿಕ ನಿವೇಶನಗಳನ್ನಾಗಿ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿದರು.

ಈ ಸಂಬಂಧ ತಮ್ಮೊಂದಿಗೆ ರಾಜಿ ಮಾಡಿಕೊಳ್ಳುವ ಉದ್ದೇಶದಿಂದ ಹಲವು ಕೋಟಿ ರೂಪಾಯಿ ನೀಡುವುದಾಗಿ ಭರವಸೆ ನೀಡಿ ಚೆಕ್‌ಗಳನ್ನೂ ನೀಡಲಾಗಿತ್ತು. ಆದರೆ ನಂತರ ಹಣ ಪಾವತಿಸದ ಕಾರಣ ಹಾಸನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ಅಂತಿಮ ಹಂತದಲ್ಲಿದ್ದು, ತೀರ್ಪಿಗಾಗಿ ಕಾಯಲಾಗುತ್ತಿದೆ.

ಎಂದು ತಿಳಿಸಿದರು. ಅದಕ್ಕೂ ಮುನ್ನವೇ ಸತ್ಯ ಮರೆಮಾಚಿ ವಿವಾದಿತ ಜಮೀನಿನ ನಿವೇಶನಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿದರು.

ಕೆಲವರು ಅಲ್ಲಿ ಕೋಟ್ಯಂತರ ರೂ.ವೆಚ್ಚದಲ್ಲಿ ಮನೆ ನಿರ್ಮಿಸುತ್ತಿದ್ದು, ತೀರ್ಪು ತಮ್ಮ ಪರವಾಗಿ ಬಂದರೆ ಕಟ್ಟಡ ತೆರವುಗೊಳಿಸಬೇಕಾದ ಎಂದು ಎಚ್ಚರಿಸಿದರು. ಆದ್ದರಿಂದ ವಿವಾದಿತ ಜಮೀನಿನಲ್ಲಿ ಯಾರೂ ಹೊಸದಾಗಿ ಮನೆ ನಿರ್ಮಾಣ ಅಥವಾ ನಿವೇಶನ ಖರೀದಿಗೆ ಮುಂದಾಗಬಾರದು ಎಂದು ಮನವಿ ಮಾಡಿದರು.

ಬಡಾವಣೆ ನಿರ್ಮಾಣವೇ ಕಾನೂನು ಬಾಹಿರ ಎಂದು ಆರೋಪಿಸಿದ ದೇವರಾಜೇಗೌಡ, ಬಡಾವಣೆ ನಕ್ಷೆ ಅನುಮೋದನೆ ರದ್ದುಪಡಿಸುವಂತೆ ಹುಡಾಗೆ, ಖಾತೆ ಮತ್ತು ಆಸ್ತಿ ದಾಖಲೆ ರದ್ದುಪಡಿಸುವಂತೆ ಹಾಸನ ಮಹಾನಗರಪಾಲಿಕೆಗೆ ಈಗಾಗಲೇ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು.

# ಸುಳ್ಳು ಆರೋಪ: ಪ್ರತಿಭಟನೆ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ತಾಲೂಕಿನ ಮೊಸಳೆ ಗ್ರಾಮದ ದಲಿತ ಮುಖಂಡ ಚಂದ್ರು ಅವರ ವಿರುದ್ಧ ಮಾಡಿರುವ ಅಕ್ರಮ ಭೂ ಕಬಳಿಕೆ ಆರೋಪ ನಿರಾಧಾರ.

ಈ ಕುರಿತಾದ ಆರೋಪ ಶುದ್ಧ ಸುಳ್ಳು ಹಾಗೂ ದುರುದ್ದೇಶಪೂರಿತ ಎಂದು ಆರ್.ಪಿ.ಐ. ರಾಜ್ಯಾಧ್ಯಕ್ಷ ಸತೀಶ್ ಹಾಗೂ ಹಿರಿಯ ದಲಿತ ಹಿರಿಯ

ಮುಖಂಡ ಹೆಚ್.ಕೆ. ಸಂದೇಶ್ ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಚಂದ್ರು ಅವರ ರಾಜಕೀಯ ಬೆಳವಣಿಗೆ ಸಹಿಸದೇ ಅವರ ತೇಜೋವಧೆ ಮಾಡುವ ಉದ್ದೇಶದಿಂದ ಕೆ.ಆರ್.ಎಸ್. ಪಕ್ಷದ ಹಲವು ಮುಖಂಡರು ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೊಸಳೆ ಗ್ರಾಮದ ಜಗದೀಶ ಹಾಗೂ ಕೆ.ಆರ್.ಎಸ್. ಪಕ್ಷದ ಗಣೇಶ, ಮಧು, ರಮೇಶ್, ಭರತ್, ಜಗಣ್ಣ ಎಂಬುವರು ಚಂದ್ರು ಅವರ ವಿರುದ್ಧ ಸುಳ್ಳು ಆರೋಪ ಮಾಡಿರುವುದು ಖಂಡನೀಯ ಎಂದರು.

ಚಂದ್ರು ಅವರ ಅಜ್ಜಿ ಜಯಲಕ್ಷ್ಮಮ್ಮ ಅವರಿಗೆ ಸೇರಿದ 1.30 ಎಕರೆ ಜಮೀನು ಕಾಲಾನಂತರ ಚಂದ್ರು ಅವರ ಹೆಸರಿಗೆ ಬಂದಿದೆ. ಗುಡ್ಡದ ತೆರಣ್ಯ ಗ್ರಾಮದ ದ್ಯಾವಮ್ಮ ಅವರಿಗೆ ಸೇರಿದ್ದ 4 ಎಕರೆ ಜಮೀನನ್ನು ಬದುಕಿದ್ದಾಗಲೇ ಅವರು ವಿಲ್ ಬರೆದಿದ್ದರು. ಇತ್ತೀಚಿದೆ ಅದು ಚಂದ್ರು ಅವರ ಪತ್ನಿ ಶೋಭಾ ಹೆಸರಿಗೆ ಕಾನೂನು ಬದ್ಧವಾಗಿ ಖಾತೆ ಆಗಿದೆ ಎಂದು ವಿವರಿಸಿದರು.

ಈ ನಡುವೆ ಜಗದೀಶ ಅವರು ಕಂದಾಯ ಸಚಿವರ ಜನಸ್ಪಂದನ ಕಾರ್ಯಕ್ರಮದಲ್ಲಿ ದೂರು ನೀಡಿದ್ದರು. ಅದರಂತೆ ಉಪ ತಹಸೀಲ್ದಾರ್ ನೇತೃತ್ವದಲ್ಲಿ ಸ್ಥಳ ಪರಿಶೀಲನೆ ನಡೆಸಿ, ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ದಾಖಲೆ ಪರಿಶೀಲಿಸಿದ ನಂತರ ಯಾವುದೇ ಅಕ್ರಮ ಕಂಡುಬಂದಿಲ್ಲ ಎಂದು ತಹಸೀಲ್ದಾರ್ ವರದಿ ನೀಡಿ, ಚಂದ್ರು ಅವರ ಖಾತೆ ಕಾನೂನುಬದ್ಧವಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ ಎಂದರು.

## ಇತಿಹಾಸದಲ್ಲಿ ಈ ದಿನ

### ಜುಲೈ-14

1772 - ಕ್ಯಾಪ್ಟನ್ ಜೇಮ್ಸ್ ಕುಕ್ ಟೆರಾ ಆಸ್ಟ್ರೇಲಿಸ್ (ದಕ್ಷಿಣ ಖಂಡ) ವನ್ನು ಹುಡುಕಲು ಊಒ ರೆಸಲ್ಯೂಶನ್ ಹಡಗಿನಲ್ಲಿ ದಕ್ಷಿಣ ಸಮುದ್ರಗಳಿಗೆ ತನ್ನ ಎರಡನೇ ಪ್ರಯಾಣವನ್ನು ಪ್ರಾರಂಭಿಸಿದರು.

1832 ರಲ್ಲಿ ಅಮೇರಿಕನ್ ಭೂಗೋಳಶಾಸ್ತ್ರಜ್ಞ ಹೆನ್ರಿ ಸ್ಕೂಲ್‌ಕ್ರಾಫ್ಟ್ ಮಿಸ್ಸಿಸ್ಸಿಪ್ಪಿ ನದಿಯ ಮೂಲವನ್ನು ಕಂಡುಹಿಡಿದರು.

1835: ಸ್ವಿಡಿಷ್-ಅಮೇರಿಕನ್ ಸಂಶೋಧಕ ಜಾನ್ ಎರಿಕ್ಸನ್ ತನ್ನ ಸ್ಕ್ರೂ ಪ್ರೊಪೆಲ್ಲರ್ ವಿನ್ಯಾಸಕ್ಕಾಗಿ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಿದರು.

1870: ಪ್ರಶ್ಯದ ರಾಜ ವಿಲ್ಹೆಲ್ಮ್ ಎಮ್ಸ್‌ರ್ ಡೆಪೆಷ್ (ಎಮ್ಸ್ ಟೆಲಿಗ್ರಾಮ್) ಅನ್ನು ಒಟ್ಟೊ ವಾನ್ ಬಿಸ್ಮಾರ್ಕ್‌ಗೆ ಕಳುಹಿಸಿದನು , ಅವರು ಫ್ರಾಂಕೊ-ಜರ್ಮನ್ ಯುದ್ಧವನ್ನು ಪ್ರಚೋದಿಸುವ ಫ್ರೆಂಚ್ ಸರ್ಕಾರವನ್ನು ಉದ್ದೇಶಪೂರ್ವಕವಾಗಿ ಅಪರಾಧ ಮಾಡಲು ಸಂಪಾದಿತ ಆವೃತ್ತಿಯನ್ನು ಪ್ರಕಟಿಸಿದರು.

1966 ಎಸಿ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು ನ್ಯೂಯಾರ್ಕ್ ನಗರದಲ್ಲಿ ಅಂತರರಾಷ್ಟ್ರೀಯ ಕೃಷ್ಣ ಪ್ರಜ್ಞೆ ಸಂಘವನ್ನು (ಹರೇ ಕೃಷ್ಣ ಚಳುವಳಿ) ಸ್ಥಾಪಿಸಿದರು.

2024 ಪೆನ್ಸಿಲ್ವೇನಿಯಾದ ಗ್ರಾಮೀಣ ಬಟ್ಲರ್‌ನಲ್ಲಿ ನಡೆದ ಹೊರಾಂಗಣ ಪ್ರಚಾರ ರ್ಯಾಲಿಯಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹತ್ಯೆಯ ಪ್ರಯತ್ನದಿಂದ ಬದುಕುಳಿದರು; ಬಂದೂಕುಧಾರಿ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ 6 ರಿಂದ 8 ಗುಂಡುಗಳನ್ನು ಹಾರಿಸಿ ಒಬ್ಬ ಪ್ರೇಕ್ಷಕನನ್ನು ಕೊಂದು, ಇಬ್ಬರನ್ನು ತೀವ್ರವಾಗಿ ಗಾಯಗೊಳಿಸಿ, ರಹಸ್ಯ ಸೇವಾ ಸ್ನೈಪರ್‌ನಿಂದ ಕೊಲ್ಲುವ ಮೊದಲು ಟ್ರಂಪ್‌ನ ಕಿವಿಗೆ ಗುಂಡು ಹಾರಿಸಿದರು.

ಈಗ ಪ್ರಸಿದ್ಧವಾಗಿರುವ ಹಾಲಿವುಡ್‌ಲ್ಯಾಂಡ್ ಚಿಹ್ನೆಯ ಸಮರ್ಪಣೆಹಾಲಿವುಡ್‌ಲ್ಯಾಂಡ್

1923 ಹಾಲಿವುಡ್ ಚಿಹ್ನೆಯನ್ನು ಲಾಸ್ ಏಂಜಲೀಸ್‌ನ ಹಾಲಿವುಡ್‌ನ ಮೇಲಿರುವ ಬೆಟ್ಟಗಳಲ್ಲಿ ಅಧಿಕೃತವಾಗಿ ಸಮರ್ಪಿಸಲಾಯಿತು. ಇದು ಮೂಲತಃ ಹಾಲಿವುಡ್‌ಲ್ಯಾಂಡ್ ಎಂದು ಓದುತ್ತದೆ, ಆದರೆ 1949 ರಲ್ಲಿ ನವೀಕರಣದ ನಂತರ ಕೊನೆಯ ನಾಲ್ಕು ಅಕ್ಷರಗಳನ್ನು ಕೈಬಿಡಲಾಯಿತು.

1956 ರಲ್ಲಿ ಆರ್‌ಸಿಎ ಎಲ್ವಿಸ್ ಪ್ರೀಸ್ಲಿಯ ಸಿಂಗಲ್ ಹೌಂಡ್ ಡಾಗ್ ಅನ್ನು ಬಿಡುಗಡೆ ಮಾಡಿತು, ಇದು ಬಿಗ್ ಮಾಮಾ ಥಾರ್ನ್‌ಟನ್‌ರ ಮೂಲ ಆಲ್ಬಮ್‌ನ ಮುಖಪುಟವಾಗಿದ್ದು, ಇದನ್ನು ಜೆರ್ರಿ ಲೀಬರ್ ಮತ್ತು ಮೈಕ್ ಸ್ಟೋಲರ್ ಬರೆದಿದ್ದಾರೆ, ಮತ್ತು ಓಟಿಸ್ ಬ್ಲ್ಯಾಕ್‌ವೆಲ್ ಬರೆದ ಡೋಂಟ್ ಬಿ ಕ್ರೂಯಲ್ ಅನ್ನು ಬೆಂಬಲಿಸುತ್ತಾರೆ.

1985 ರ ವೆಂಬ್ಲಿ ಕ್ರೀಡಾಂಗಣ (ಲಂಡನ್) ಮತ್ತು ಜೆಎಫ್‌ಕೆ ಕ್ರೀಡಾಂಗಣ (ಫಿಲಡೆಲ್ಫಿಯಾ, ಪೆನ್ಸಿಲ್ವೇನಿಯಾ) ಎರಡರಲ್ಲೂ ನಡೆದ ಲೈವ್ ಏಡ್ ಸಂಗೀತ ಕಚೇರಿಗಳು ಆಫ್ರಿಕನ್ ಕ್ಷಾಮ ಪರಿಹಾರಕ್ಕಾಗಿ 70 ಮಿಲಿಯನ್‌ಗಿಂತಲೂ ಹೆಚ್ಚು ಹಣವನ್ನು ಸಂಗ್ರಹಿಸಿದವು.

# ಮೋಣು - 4

**ಧನಂಜಯ ಜೀವಾಳ ಬಿ.ಕೆ.**

ಗ್ರಾಮಾಯಣ-20

ಶುಂಠಿ ಬೆಳೆಗೆ ಬೆಲೆ ಸರಸರನೆ ಏರುತ್ತಿತ್ತು. ನಾನೂರ ಐವತ್ತು ಇದ್ದದ್ದು ಒಂದೇ ವಾರದೊಳಗೆ ಆರುನೂರಐವತ್ತು ಆಗುವುದೇ. ಅನೇಕ ಕಡೆ ಕೊಳೆ ರೋಗ ಬಂದು ಹೆಂಡತಿ ತಾಳಿ ಅಡವು ಇಟ್ಟು ಶುಂಠಿ ಮಾಡಿದವರು ಮನೆ ಕಡೆ ತಲೆ ಹಾಕುವುದನ್ನೆ ಬಿಟ್ಟು ಗದ್ದೆಯಲ್ಲೇ ಇದ್ದ ಗುಡಾರದಲ್ಲಿ ಕಾಲ ಕಳೆಯತೊಡಗಿದರು. ಹೊರಗಡೆ ಕೈಸಾಲ ಮಾಡಿದವರು ಮನೆಯಿಂದ ಹೊರಹೋಗುವುದನ್ನೆ ಕಡಿಮೆಮಾಡಿದರು. ಬ್ಯಾಂಕಿನ ಹೆಸರು ಹೇಳಿದರೇ ಮಿಡುಕಿಬೀಳುವವರ ಸಂಖ್ಯೆ ಏನೂ ಕಡಿಮೆ ಇರಲಿಲ್ಲ.

ಯಾವ ಗದ್ದೆ ಬಯಲಿಗೆ ಹೋದರೂ ಚಿತ್ರವಿಚಿತ್ರ ಔಷಧಿಯ ವಾಸನೆ ಮೂಗಿಗೆ ಅಡರುತ್ತಿತ್ತು. ಉಳಿದಷ್ಟಾದರೂ ಉಳಿಯಲಿ ಎಂದು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದವರೂ ಯಾಕೋ ತಮ್ಮ ಪ್ರಯತ್ನಗಳೆಲ್ಲಾ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಅನಿಸಿ ಮಂಕಾಗತೊಡಗಿದರು. ನಾನೆರಡು ಎಕರೆ, ನಾನು ನಾಲ್ಕು ಎಕರೆ ಎಂದು ಶುರುವಿನಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದವರೆಲ್ಲಾ ಈಗ ಶುಂಠಿ ಬೆಳೆಯುತ್ತಿದ್ದೇವೆ ಎಂದು ಹೇಳಿಕೊಳ್ಳಲು ಹಿಂಜರಿಯತೊಡಗಿದರು. ರೈತರ ಉತ್ಸಾಹ, ವೇಗವನ್ನು ಕಂಡು ಕೇಳಿಕೇಳಿದಷ್ಟು ಸಾಲ ಕೊಟ್ಟ ಬೀಜ, ಗೊಬ್ಬರ, ಔಷಧಿಯವರೆಲ್ಲ ಈಗ ತಳಮಳಿಸತೊಡಗಿದರು. ದಿನಾ ಅದಕ್ಕೆ ಇದಕ್ಕೆ ಎಂದು ಪೇಟೆಗೆ ಬರುತ್ತಿದ್ದ ರೈತರು ಕ್ರಮೇಣ ಕಣ್ಮರೆಯಾಗತೊಡಗಿದರು. ಸಾಂಪ್ರದಾಯಿಕ ಕಾಫಿ, ಏಲಕ್ಕಿ, ಅಡಿಕೆ, ಭತ್ತ, ಬಾಳೆ ಎಲ್ಲವನ್ನು ಬಿಟ್ಟು ಶುಂಠಿ ಎಂಬ ಮಾಯಾಂಗನೆಯ ಬೆನ್ನುಹತ್ತಿದ್ದ ಮಲೆನಾಡಿಗರು ಇಂಗುತಿಂದ ಮಂಗನಂತೆ ಆಗಿದ್ದರು. ಐದು ಎಕರೆ ಶುಂಠಿ ಹಾಕಿಸಿದ್ದಾರಂತೆ ಎಂದೇ ಮಗಳನ್ನು ಮದುವೆ ಮಾಡಿಕೊಡಲು ನಿಶ್ಚಯ ಮಾಡಿಕೊಂಡವರು, ಬರುವ ಬೆಳೆಯನ್ನೇ ನಂಬಿಕೊಂಡು ಡೌನ್ ಪೇಮೆಂಟ್‌ನಲ್ಲಿ ಕಾರು ತಂದವರ ಪಾಡಂತೂ ಹೇಳತೀರದು.

ಮಲೆನಾಡಿನ ಜೀವನಾಡಿಯೇ ಆಗಿದ್ದ ಗದ್ದೆಗಳು ಶುಂಠಿಬೆಳೆಯ ದಾಳಿಯಿಂದ ನಿರ್ಜೀವಗೊಳ್ಳತೊಡಗಿದವು. ಹರಿಯುವ ಹಳ್ಳಗಳಲ್ಲಿ ಒಂದೇ ಒಂದೂ ಏಡಿ, ಕಪ್ಪೆ, ಮೀನು ಇರಲಿ ಕಡೆಗೆ ಹಾವುಗಳೂ ಹೇಳಹೆಸರಿಲ್ಲದಂತಾದವು. ಹಸಿರು ಪೈರು, ಜುಳುಜುಳು ಹರಿಯುತ್ತಿದ್ದ ನೀರಿನ ವಿಶಿಷ್ಟ ಅಹ್ಲಾದಕರ ಸನ್ನಿವೇಶ ಮಾಯವಾಗಿ ವಿಷಯುಕ್ತ ಔಷಧಿಗಳ ವಿಪರೀತ ಉಪಯೋಗದಿಂದ ಇಡೀ ವಾತಾವರಣವೇ ಮರಣಸದೃಶ ನಾತಾವರಣವಾಗಿ ಪರಿವರ್ತನೆಯಾಗಿತ್ತು. ಎಷ್ಟು ಬಗೆಯ ಔಷಧಿಯನ್ನು ಗದ್ದೆಗೆ ಸುರಿದಿದ್ದರು ಎಂದರೆ ಅಪ್ಪಿತಪ್ಪಿ ಎಲ್ಲಾದರೂ ಶುಂಠಿ ಉಳಿದಿದ್ದರೆ ಅದನ್ನು ಜಜ್ಜಿ ಹಿಂಡಿದ್ದರೆ ಶುಂಠಿರಸದ ಬದಲು ಕೀಟನಾಶಕವೇ ಸುರಿಯುತ್ತಿತ್ತೇನೋ?

ಇಂಥ ಪರಿಸ್ಥಿತಿಯಲ್ಲಿ ಸ್ಥಳೀಯರು ಮಾಡಿದ್ದ ಶುಂಠಿ ಬೆಳೆಯಲ್ಲಿ ಮುಕ್ಕಾಲು ಪಾಲು ಕೇಡು ಎಂದು ಕರೆಯಲ್ಪಡುವ ಕೊಳೆರೋಗಕ್ಕೆ ತುತ್ತಾಗಿ ಆ ರೈತರೆಲ್ಲಾ ಲಕ್ವ ಹೊಡೆದಂತೆ ಮಗ್ಗುಲಾಗಿ, ಬೆಳಿಗ್ಗೆ ಎದ್ದು ಮನೆ ಜಗುಲಿ ಎದುರಿನ ಅಂಗಳಕ್ಕೆ ಬರಲೂ ಹಿಂಜರಿಯುತ್ತಿದ್ದರು. ವಿಶೇಷವೆಂದರೆ ಕೇರಳ ಮೂಲದ ಗುತ್ತಿಗೆ ಬೆಳೆಗಾರರು ಹಾಗೂ ಅವರ ಆಪ್ತರಾಗಿದ್ದ ಕೆಲ ಸ್ಥಳೀಯ ಕೃಷಿಕರು ಮತ್ತು ಕೇರಳದವರೊಂದಿಗೆ ಪಾಲುದಾರರಾಗಿ ಶುಂಠಿ ಬೆಳೆದಿದ್ದವರುಗಳ ಶುಂಠಿ ಮಾತ್ರ ಏನೂ ಅನಾಹುತವೇ ಆಗಿಲ್ಲವೆಂಬಂತೆ ನಳನಳಿಸುತ್ತಿದ್ದವು. ಯಾವಾಗ ಬೆಳೆ ವ್ಯಾಪಕವಾಗಿ ನಾಶವಾಗುತ್ತಾ ಬಂತೋ ಸ್ಥಳೀಯರಿಗೆ ತಿಳಿಯದಿದ್ದ ಔಷಧಿ ಉಪಯೋಗಿಸಿ ಉಳಿಸಿಕೊಂಡಿದ್ದ ಇವರುಗಳ ಶುಂಠಿಗೆ ಚಿನ್ನದ ಬೆಲೆ ಬರತೊಡಗಿತು.

ಈ ನಡುವೆ ಕೆಲ ಹುಡುಗರು ತಾವು ತಾವೇ ಸೇರಿಕೊಂಡು ಯಾರದೋ ಗದ್ದೆಯನ್ನು ಗುತ್ತಿಗೆ ತೆಗೆದುಕೊಂಡು ಶುಂಠಿ ಮಾಡಿದ್ದರು. ಕೆಲ ಕೃಷಿಕರು ಕಣ, ಮನೆಯಂಗಳವನ್ನೇ ಅಗೆದು, ಮಡಿ ಮಾಡಿ ಶುಂಠಿ ನೆಟ್ಟಿದ್ದರು. ಇನ್ನು ಕೆಲವೆಡೆ ಖಾಲಿ ಇದ್ದ ಯಾರದೋ ಜಾಗ, ಈಚಲಹರ, ಪಾಳು ಲಂಟಾನದ ಜಾಗವನ್ನೆಲ್ಲಾ ಸಾಗುಮಾಡಿ ಕಂಡಕಂಡಲ್ಲೆಲ್ಲಾ ಶುಂಠಿ ನಾಟಿ ಮಾಡಿದ್ದೇ ಮಾಡಿದ್ದು. ಪರಿಣಾಮವಾಗಿ ವಿಪರೀತ ಮಳೆಯಾದಾಗ ಮೇಲ್ಮಣ್ಣು ತೀವ್ರವಾಗಿ ಕೊಚ್ಚಿಹೋಗಿ ಹೊಳೆ-ನದಿಗಳ ಪಾತ್ರ, ಸಮೀಪದ ಜಲಾಶಯಗಳೆಲ್ಲಾ ಹೂಳಿನಿಂದ ತುಂಬಿಹೋಯಿತು. ಎಲ್ಲಿ ಏನಾದರೂ ನಮಗೇನು ಎಂದುಕೊಂಡು ಒಟ್ಟಾರೆ ದುಡ್ಡಾದರೆ ಸಾಕೆಂದು



ಅಳಿದುಳಿದ ಶುಂಠಿಯನ್ನು ಏನಾದರೂ ಸರ್ಕಸ್ ಮಾಡಿ ಉಳಿಸಿಕೊಳ್ಳಲು ಹರಸಾಹಸ ಮಾಡುತ್ತಿದ್ದರು. ಗಿಡ ಹಸುರಾಗಿದೆಯಲ್ಲ ಎಷ್ಟು ಶುಂಠಿ ಇರಬಹುದೆಂದು ಗಿಡ ಹಿಡಿದು ಮೃದುವಾಗಿ ಮೇಲಕ್ಕೆ ಜಗ್ಗಿದರೆ ಕೊಳೆತಂತಾಗಿದ್ದ ಬುಡದ ಗಿಡ ಪುಸಕ್ಕನೆ ಕೈಗೇ ಬರುತ್ತಿತ್ತು. ಬುಡದ ಮಣ್ಣು ಕೆದಕಿ ನೋಡಿದರೆ ನೆಂದ ಬೂದಿಯಂಥ ಶುಂಠಿಯ ಗೆಡ್ಡೆ ತಡೆಯಲಸಾಧ್ಯವಾದ ವಾಸನೆಯೊಂದಿಗೆ ಅಣಕಿಸುತ್ತಾ ಗೋಚರಿಸುತ್ತಿತ್ತು. ಇದನ್ನು ನೋಡಿ ಎದೆಯೊಡೆದಂತಾದ ರೈತರು ಪರೀಕ್ಷಿಸುವ ಗೋಜಿಗೆ ಹೋಗುವುದನ್ನೇಬಿಟ್ಟರು. ಹಾಕಿದ ಬೀಜದ ದುಡ್ಡಾದ್ರೂ ಬರಲಿ ಎಂದು ಹರಕೆ ಹೊತ್ತು ಕೋಳಿ-ಕುರಿ ಕಡಿದು ಬಲಿ ನೀಡಿದವರೂ ಕಡಿಮೆ ಇರಲಿಲ್ಲ.

ವ್ಯಾಪಾರಿಗಳೇ ಬೆಚ್ಚಿ ಬೀಳುವಂತೆ ಶುಂಠಿಯ ಬೆಲೆ ತಿಂಗಳೊಳಗೆ ಅರವತ್ತು ಕೇಜೀ ಮೂಟೆಗೆ ಒಂದು ಸಾವಿರದ ಐನೂರು ರೂಪಾಯಿ ದಾಟಿ ನಾಗಾಲೋಟದಲ್ಲಿ ಮುಂದೋಡುತ್ತಿತ್ತು. ಇದೇ ಸಮಯದಲ್ಲಿ ಗದ್ದೆಗಳನ್ನು ಗುತ್ತಿಗೆಗೆ ನೀಡಿದ್ದ ಕೆಲ ರೈತರುಗಳು ದೂರಾಲೋಚನೆ ಶುರುಮಾಡಿದರು. ಕರಾರು ಪತ್ರದಂತೆ ಒಪ್ಪಿದ ಗುತ್ತಿಗೆ ಹಣದಲ್ಲಿ ಮೂರನೇ ಎರಡು ಭಾಗವನ್ನು ಬೀಜ ನೆಡುವ ಮುಂಚೆಯೇ ಸಂದಾಯ ಮಾಡಿದ್ದವರು; ಶುಂಠಿ ಕಿತ್ತು ಮೂಟೆಗೆ ತುಂಬಿದ ಕೂಡಲೇ ಉಳಿದ ಹಣವನ್ನು ಪಾವತಿಮಾಡಬೇಕಿತ್ತು. ನಂತರ ಮಡಿಗಳನ್ನು ಮಾಡಿದ್ದ ಗದ್ದೆಯನ್ನು ಟ್ರ್ಯಾಕ್ಟರ್‌ನಲ್ಲಿ ಹೂಡಿ ಸಮತಟ್ಟು ಮಾಡಿಕೊಡಬೇಕಿತ್ತು. ಇದೇ ಸಮಯದಲ್ಲಿ ಮಂಜಯ್ಯ ತನ್ನ ತೋಳನ ಬುದ್ಧಿ ಪ್ರದರ್ಶಿಸತೊಡಗಿದ. ಒಂದು ದಿನ ಗದ್ದೆಗೆ ಬಂದವನೇ ಔಔಮೋಣು ಏ! ಮೋಣು; ನೋಡು ಮಾರಾಯ ಅಗ್ರಿಮೆಂಟ್‌ನಂತೆ ಎಕರೆಗೆ ಮೂರು ಸಾವಿರಕ್ಕೆ ಆಗಲ್ಲ, ಹತ್ತು ಸಾವಿರ ಕೊಡಬೇಕುಟಟ ಎಂದ. ಬೆಚ್ಚಿ ಬಿದ್ದ ಮೋಣು ಔಅಲ್ಲ ಅಣ್ಣ; ಅಗ್ರಿಮೆಂಟ್ ಆಗಿರೋದು ಮೂರುಸಾವಿರಕ್ಕೆ ಅಲ್ವ?ಟ ಔನೋಡಾ ಮಾರಾಯ, ಅದು ಅವತ್ತಿನ ರೇಟು; ಈಗ ಮಾರ್ಕೆಟೇ ಬೇರೆ. ನೀನು ಎಕರೆಗೆ ಹತ್ತು ಸಾವಿರ ರೂಪಾಯಿ ಕೊಟ್ಟರೆ ಮಾತ್ರ ಶುಂಠಿ ಕೀಳಕ್ಕೆ ಬಿಡುತೀನಿ; ಇಲ್ದಿದ್ರೆ ಗೊತ್ತಾಲ್ಲಾ?ಟ ಇನ್ನೇನು ಒಂದು ವಾರದೊಳಗೆ ಶುಂಠಿ ಕೀಳಬೇಕೆಂದುಕೊಂಡಿದ್ದ ಮೋಣುವಿಗೆ ಇದೊಂದು ಆಘಾತವಾಗಿತ್ತು. ಔಅಲ್ಲ ಅಣ್ಣ ಬೆಲೆ ಚೆನ್ನಾಗಿದೆ ಸರಿ, ನಾವೂ ಸಾಕಷ್ಟು ಹಣ ಸುರಿದಿದ್ದೀವಿ, ರಕ್ತಾನೇ ಬಸಿದಿದ್ದೀವಿ. ಎಕರೆಗೆ ಒಂದು ಸಾವಿರ ಸೇರಿಸಿಕೊಡುತ್ತೇನೆ. ಕಳೆದ ಮೂರು ವರ್ಷದಲ್ಲಿ ನನ್ನ ಮನೆಯೇ ಹಾಳಾಗಿದೆ, ಮನೆಯಲ್ಲಿ ಇದ್ದ ಸಾಮಾನುಗಳನ್ನೆಲ್ಲ ಮಾರಿಕೊಂಡಿದ್ದೇನೆ. ಬದುಕಿದ್ರೆ ಈ ಬಾರಿಯೇ ಬದುಕಬೇಕು. ಅಷ್ಟೆಲ್ಲ ಕೊಡಕ್ಕೆ ಆಗೋಲ್ಲ. ಸ್ವಲ್ಪ ನ್ಯಾಯ ಯೋಚನೆ ಮಾಡ್ರಿಟ ಎಂದ. ಔಏಯ್! ಬೋಳಿಮಗನೇ, ನನ್ನ ಹತ್ರಾನೇ ಕಾನೂನು ಮಾತನಾಡುತ್ತೀಯ, ಅದೆಂಗೆ ಶುಂಠಿ ಕೀಳುತ್ತೀಯಾ ನೋಡ್ತೀನಿಟಟ ಎಂದವನೇ ಮಂಜಯ್ಯ ಬಿರಬಿರನೇ ಪೇಟೆಗೆ ಬಂದ.